## 3 ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ

## ಸಿ.ಸಿ. ಸಂಖ್ಯೆಃ 500/2021

## ದಿನಾಂಕಃ 02 ನೇ ಏಪ್ರಿಲ್ 2026

ಉಪಸ್ಥಿತರುಃ ಶ್ರೀ ರವಿಪ್ರಕಾಶ್ ಟಿ ಆವಿನ್, ಬಿ.ಬಿ.ಎ., ಎಲ್.ಎಲ್.ಎಮ್,
3 ನೇ ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಕನಕಪುರ.

**ಫಿರ್ಯಾದುದಾರರು : ಸಾತನೂರು ಪೊಲೀಸ್ ಠಾಣೆ**

**(ಸರ್ಕಾರಿ ಸಹಾಯಕ ಅಭಿಯೋಜಕರವರಿಂದ)**

**ವಿರುದ್ಧ**

**ಆರೋಪಿತರು** :

1. ಮಹದೇವ
ಬಿನ್ ಲೇಟ್ ಬಸಪ್ಪ,
ವಯಸ್ಸು 55 ವರ್ಷಗಳು,

2. ಮಹೇಶ್
ಬಿನ್ ಮಹದೇವ,
ವಯಸ್ಸು 20 ವರ್ಷಗಳು,

3. ಶಿವಲಿಂಗ
ಬಿನ್ ಗುರುಮಲ್ಲಪ್ಪ
ವಯಸ್ಸು 30 ವರ್ಷಗಳು,

4. ಪ್ರತಾಪ್
ಬಿನ್ ರಾಜಣ್ಣ
ವಯಸ್ಸು 27 ವರ್ಷಗಳು,

ಎಲ್ಲರ ವಾಸಃ
ಕಬ್ಬಾಳು ಗ್ರಾಮ,
ಸಾತನೂರು ಹೋಬಳಿ,
ಕನಕಪುರ ತಾಲ್ಲೂಕು,
ರಾಮನಗರ ಜಿಲ್ಲೆ.

**(ಶ್ರೀ ಕೆ.ವೈ.ಎಸ್., ವಕೀಲರವರಿಂದ )**

| | | |
|---|---|---|
| 1 | ಘಟನೆ ನಡೆದ ದಿನಾಂಕ | : 07.12.2020 |
| 2 | ಘಟನೆ ವರದಿ ಮಾಡಿದ ದಿನಾಂಕ | : 10.12.2020 |
| 3 | ಪಿರ್ಯಾದುದಾರರ ಹೆಸರು | : ಜಯಶ್ರೀ |
| 4 | ವಿಚಾರಣೆ ಪ್ರಾರಂಭವಾದ ದಿನಾಂಕ | : 26.03.2026 |
| 5 | ವಿಚಾರಣೆ ಮುಕ್ತಾಯವಾದ ದಿನಾಂಕ | : 26.03.2026 |
| 6 | ಆರೋಪಿಸಲ್ಪಟ್ಟ ಅಪರಾಧಗಳು | : ಭಾರತೀಯ ದಂಡ ಸಂಹಿತೆಯ ಕಲಂ 323, 324,427, 447, 504, 506 ರೆ/ವಿ 34 |
| 7 | ತೀರ್ಪು ಉದ್ಘೋಷಣೆ ಮಾಡಿದ ದಿನಾಂಕ | : 02.04.2026 |
| 8 | ನ್ಯಾಯಾಧೀಶರ ಅಭಿಪ್ರಾಯ | : ಆರೋಪಿತರನ್ನು ಅಪರಾಧಗಳಿಂದ ದೋಷ ಮುಕ್ತಗೊಳಿಸಿದೆ. |

**:ತೀರ್ಪು::**

ಪೊಲೀಸ್ ಸಬ್ ಇನ್ಸ್ ಪೆಕ್ಟರ್, ಸಾತನೂರು ಪೊಲೀಸ್ ಠಾಣೆ, ಕನಕಪುರ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 427, 447, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ :**

ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ, ಸಾತನೂರು ಪೊಲೀಸ್ ಠಾಣಾ ಸರಹದ್ದು, ಸಾತನೂರು ಹೋಬಳಿ, ಕಂಸಾಗರ ಗ್ರಾಮದ ಸರ್ವೇ ನಂ.34/1 ರಲ್ಲಿರುವ ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರ ಜಮೀನಿನಲ್ಲಿ ಇರುವಾಗ ದಿನಾಂಕಃ 07.12.2020 ರಂದು ಬೆಳಗ್ಗೆ 07.30 ಗಂಟೆ ಸಮಯದಲ್ಲಿ, 1 ರಿಂದ 4 ನೇ ಆರೋಪಿಗಳು ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರಿಗೆ ಅವಾಚ್ಯ ಶಬ್ಧಗಳಿಂದ ಬೈಯುತ್ತಾ, ಚಾಸಾ-1/ಜಯಶ್ರೀ ರವರಿಗೆ ಸೇರಿದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದು, 3 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1/ಜಯಶ್ರೀ ಕೈಗಳಿಗೆ, ಕೆಳ ಹೊಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, 2 ನೇ ಆರೋಪಿಯು ಚಾಸಾ-2/ಕಿರಣ್ ರವರಿಗೆ ತಾನು ತಂದಿದ್ದ ದೊಣ್ಣೆಯಿಂದ ಎಡ ಮೊಣಕೈಗೆ, ಕುತ್ತಿಗೆಗೆ ಹೊಡೆದು ತರಚಿದ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, 1 ರಿಂದ 4 ನೇ ಆರೋಪಿಗಳು ಚಾಸಾ-3/ಬಸವರಾಜು ರವರಿಗೆ ಕೈಗಳಿಂದ ಹೊಡೆದು ಕೆಳಕ್ಕೆ ಬೀಳಿಸಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, 1 ರಿಂದ 4 ನೇ ಆರೋಪಿಗಳು ಜಮೀನಿನಲ್ಲಿದ್ದ ಪೈಪುಗಳನ್ನು ಹೊಡೆದು ಹಾಕಿ ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರಿಗೆ ಪ್ರಾಣ ಬೆದರಿಕೆಯನ್ನು

ಹಾಕಿರುತ್ತಾರೆಂದು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 323, 324, 427, 447, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ.

**3.** ಆರೋಪಿತರು ಜಾಮೀನಿನ ಮೇಲೆ ಬಿಡುಗಡೆ ಆಗಿದ್ದು, ಅವರಿಗೆ ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ಅಭಿಯೋಜನೆಯ ಪರ ದಾಖಲೆಗಳನ್ನು ಒದಗಿಸಲಾಗಿರುತ್ತದೆ.

**4.** ಭಾರತೀಯ ದಂಡ ಸಂಹಿತೆಯ ಕಲಂ 323, 324,427, 447, 504, 506 ರೆ/ವಿ 34 ರ ಅಪರಾಧಗಳಿಗೆ ದೋಷಾರೋಪಣ ಪತ್ರ ಸಲ್ಲಿಸಿರುತ್ತಾರೆ. ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ, ಆರೋಪಿತರಿಗೆ ಓದಿ ಹೇಳಿದ್ದು ಅವರು ಅದನ್ನು ಅಲ್ಲಗಳೆದಿದ್ದರಿಂದ ವಿಚಾರಣೆಗೆ ಮುಂದೂಡಲಾಯಿತು.

**5.** ಅಭಿಯೋಜನೆಯು ದೋಷಾರೋಪಣೆ ಪಟ್ಟಿಯ 10 ಸಾಕ್ಷಿದಾರರಲ್ಲಿ, ಮೂರು ಜನ ಸಾಕ್ಷಿದಾರರನ್ನು ಮಾತ್ರ ಪ್ರಾ.ಸಾ-1 ರಿಂದ ಪ್ರಾಸಾ-3 ಎಂಬುದಾಗಿ ವಿಚಾರಣೆಗೊಳಪಡಿಸಿರುತ್ತದೆ. ವಿಚಾರಣೆ ಮಾಡಿ 4 ದಾಖಲೆಗಳನ್ನು ನಿಶಾನೆ.ಪಿ-1 ರಿಂದ ನಿಶಾನೆ.ಪಿ-4 ಎಂದು ಗುರುತಿಸಲಾಗಿದೆ.

**6.** ಅಭಿಯೋಜನೆಯ ಪಕ್ಷದ ಪ್ರಕರಣಕ್ಕೆ ಪೂರಕವಾಗಿ ಪ್ರಾ.ಸಾ-1 ರಿಂದ 3 ರವರು ನುಡಿಯದೇ ಪ್ರತಿಕೂಲ ಸಾಕ್ಷಿದಾರರಾಗಿದ್ದು, ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವು ದೊರೆಯದಿದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ದಾಖಲಿಸುವ ಹೇಳಿಕೆಯನ್ನು ವಿನಾಯಿತಿ ನೀಡಲಾಯಿತು.

**7.** ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಅಭಿಯೋಜಕರು ಹಾಜರು ಪಡಿಸಿದ ಸಾಕ್ಷ್ಯಗಳ ಹೇಳಿಕೆಗಳನ್ನು, ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಮತ್ತು ಉಭಯ ವಕೀಲರು ಮಂಡಿಸಿದ ವಾದ ವಿವಾದದ ಮೇರೆಗೆ ಪರಿಗಣನೆಗೆ ಉಬ್ದವಿಸುವ ಅಂಶಗಳು ಯಾವುವೆಂದರೆ;

**ಅಂಶ 1.** ಸಾತನೂರು ಪೊಲೀಸ್ ಠಾಣಾ ಸರಹದ್ದು, ಸಾತನೂರು ಹೋಬಳಿ, ಕಂಸಾಗರ ಗ್ರಾಮದ ಸರ್ವೇ ನಂ.34/1 ರಲ್ಲಿರುವ ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರ ಜಮೀನಿನಲ್ಲಿ ಇರುವಾಗ ದಿನಾಂಕಃ 07.12.2020 ರಂದು ಬೆಳಗ್ಗೆ 07.30 ಗಂಟೆ ಸಮಯದಲ್ಲಿ, 1 ರಿಂದ 4ನೇ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 504 ರೆ/ ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 2.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1/ಜಯಶ್ರೀ ರವರಿಗೆ ಸೇರಿದ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ

ಭಾರತೀಯ ದಂಡ ಸಂಹಿತೆಯ ಕಲಂ 447 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 3.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ 3 ನೇ ಆರೋಪಿಯು ದೊಣ್ಣೆಯಿಂದ ಚಾಸಾ-1/ಜಯಶ್ರೀ ಕೈಗಳಿಗೆ, ಕೆಳ ಹೊಟ್ಟೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, 2 ನೇ ಆರೋಪಿಯು ಚಾಸಾ-2/ಕಿರಣ್ ರವರಿಗೆ ತಾನು ತಂದಿದ್ದ ದೊಣ್ಣೆಯಿಂದ ಎಡ ಮೊಣಕೈಗೆ, ಕುತ್ತಿಗೆಗೆ ಹೊಡೆದು ತರಚಿದ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 324 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 4.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-3/ಬಸವರಾಜು ರವರಿಗೆ ಕೈಗಳಿಂದ ಹೊಡೆದು ಕೆಳಕ್ಕೆ ಬೀಳಿಸಿ ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ

ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 323 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 5.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಜಮೀನಿನಲ್ಲಿದ್ದ ಪೈಪುಗಳನ್ನು ಹೊಡೆದು ಹಾಕಿ ನಷ್ಟವನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 427 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 6.** ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಗಳು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-1/ಜಯಶ್ರೀ, ಚಾಸಾ-2/ಕಿರಣ್ ಮತ್ತು ಚಾಸಾ-3/ಬಸವರಾಜು ರವರಿಗೆ ಪ್ರಾಣ ಬೆದರಿಕೆಯನ್ನು ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆಯ ಕಲಂ 506 ರೆ/ವಿ 34 ರಡಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

**ಅಂಶ 7.** ಯಾವ ಆದೇಶ ?

**9.** ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯದ ಉತ್ತರ ಈ ಕೆಳಗಿನಂತಿದೆಃ

**ಅಂಶ-1 : ನಕಾರಾತ್ಮಕವಾಗಿ**

**ಅಂಶ-2 : ನಕಾರಾತ್ಮಕವಾಗಿ**

**ಅಂಶ-3 : ನಕಾರಾತ್ಮಕವಾಗಿ**

**ಅಂಶ-4 : ನಕಾರಾತ್ಮಕವಾಗಿ**

**ಅಂಶ-5 : ನಕಾರಾತ್ಮಕವಾಗಿ**

**ಅಂಶ- 6: ನಕಾರಾತ್ಮಕವಾಗಿ**

**ಅಂಶ-7 : ಅಂತಿಮ ಆದೇಶ**

## ಕಾರಣಗಳು

**10. ಅಂಶ-1 ರಿಂದ 6 :** ಸಂಗತಿಯ ಪುನರಾವರ್ತನೆಯನ್ನು ತಪ್ಪಿಸಲು ಹಾಗೂ ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

**11.** ಅಭಿಯೋಜನೆಯು ಪ್ರಕರಣವನ್ನು ರುಜುವಾತು ಪಡಿಸಲು ತನ್ನ ಪರವಾಗಿ ಮೂರು ಸಾಕ್ಷಿದಾರರನ್ನು ಪ್ರಾ.ಸಾ-1 ರಿಂದ 3 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ.

**12.** ಪ್ರಾ.ಸಾ-1 ಜಯತ್ರೀ ಪಿರ್ಯಾದಿ ಸಾಕ್ಷಿದಾರರಾಗಿರುತ್ತಾರೆ. ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಮತ್ತು ನಿಪಿ-1 ದೂರು, ನಿಪಿ-2 ಪಂಚನಾಮೆ ಅಂಶಗಳನ್ನು

ಅಲ್ಲಗಳೆದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**13.** ಪ್ರಾ.ಸಾ-2 ಕಿರಣ್ ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ನಿಪಿ-3 ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**14.** ಪ್ರಾ.ಸಾ-3 ಬಸವರಾಜು ತಮ್ಮ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಗೆ ಪೂರಕವಾಗಿ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಲು ಕೇಳಿಕೊಂಡು, ಪಾಟೀ ಸವಾಲಿಗೆ ಒಳ ಪಡಿಸಿರುತ್ತಾರೆ. ಪಾಟೀ ಸವಾಲಿನಲ್ಲಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಗಲಾಟೆಯ ಬಗ್ಗೆ ಕೇಳಿರುತ್ತಾರೆ, ಅದಕ್ಕೆ ಸದರಿ ಸಾಕ್ಷಿದಾರರು ತಮ್ಮ ನಿಪಿ-4 ಹೇಳಿಕೆಯನ್ನು

ಅಲ್ಲಗಳೆದಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿದಾರರಿಂದ ಅಭಿಯೋಜನೆಗೆ ಯಾವುದೇ ಅನುಕೂಲವಾಗಿರುವುದಿಲ್ಲ.

**15.** ಈ ಸಾಕ್ಷಿದಾರರ ವಿಚಾರಣೆ ಆದ ನಂತರ ಮಾನ್ಯ ಸರ್ಕಾರಿ ಅಭಿಯೋಜಕರು ದೋಷಾರೋಪಣೆ ಪಟ್ಟಿಯಲ್ಲಿ ಹೆಸರಿಸಲಾದ ಉಳಿದ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸಲು ಕೋರಿಕೊಂಡಿರುತ್ತಾರೆ. ಆದರೆ ಈ ಪ್ರಕರಣದ ಫಿರ್ಯಾದುದಾರರು ಮತ್ತು ಗಾಯಾಳುಗಳು ಸ್ವತಃ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೆ ಇದ್ದುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರೂ ಸಹ ಅಭಿಯೋಜನೆಗೆ ಯಾವುದೇ ಪ್ರಯೋಜನ ಆಗುವುದಿಲ್ಲ ಎಂದು ತೀರ್ಮಾನಿಸಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನೆಯ ಪರ ಸಾಕ್ಷ್ಯವನ್ನು ಮುಕ್ತಾಯಗೊಳಿಸಿತು.

**16.** ಈ ಪ್ರಕರಣದಲ್ಲಿ ಪ್ರಮುಖವೆಂದು ಹೇಳಲಾದ ವ್ಯಕ್ತಿಗಳು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲವಾದ್ದರಿಂದ ಅಭಿಯೋಜನೆಯು ಈ ಪ್ರಕರಣದಲ್ಲಿ ಯಾವುದೇ ಹುರುಳು ಇಲ್ಲವೆಂದು ಸ್ಪಷ್ಟವಾಗಿ ಕಂಡು ಬರುತ್ತದೆ. ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳು ಕೇವಲ ಆರೋಪಗಳಾಗಿಯೇ ಉಳಿಯುತ್ತವೇ ವಿನಃ ಯಾವುದೇ ಸಾಕ್ಷ್ಯಾಧಾರಗಳಿಂದ ರುಜುವಾತು ಆಗಿರುವುದಿಲ್ಲ.

**17.** ಆದ್ದರಿಂದ ಅಭಿಯೋಜನೆಯು ಆರೋಪಿತರ ವಿರುದ್ಧ ಆರೋಪಿಸಲಾದಂತಹ ಭಾರತೀಯ ದಂಡ ಸಂಹಿತೆಯ ಕಲಂ 323, 324, 427, 447, 504, 506 ರೆ/ವಿ 34 ರ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿದೆ ಹಾಗೂ

ಅಭಿಯೋಜನೆಯು ಆರೋಪಿತರ ಮೇಲಿನ ಅಪರಾಧವನ್ನು ಎಲ್ಲಾ ಸಂಶಯಾತೀತ ಕಾರಣಗಳಿಂದ ಹೊರತುಪಡಿಸಿ ರುಜುವಾತು ಪಡಿಸಬೇಕೆಂಬುದು ಕ್ರಿಮಿನಲ್ ನ್ಯಾಯಶಾಸ್ತ್ರದ ಸಾಮಾನ್ಯ ನಿಯಮವಾಗಿದ್ದು, ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಲ್ಲಿ ವಿಫಲವಾಗಿರುವುದರಿಂದ ಮತ್ತು ಸಂಶಯದ ಲಾಭವನ್ನು ಆರೋಪಿತರಿಗೆ ಕೊಡಬೇಕಾಗಿರುವುದು ಸಾಮಾನ್ಯ ಕಾನೂನಿನ ತತ್ವವಾಗಿರುವುದರಿಂದ ಈ ಮೇಲಿನ **ಅಂಶ-1 ರಿಂದ 6 ಗಳನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**16. ಅಂಶ-6:** ಅಂಶ-1 ರಿಂದ 6 ರಲ್ಲಿ ಹೇಳಲಾದ ಕಾರಣಗಳಿಂದಾಗಿ, ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಲು ವಿಫಲರಾಗಿರುವ ಕಾರಣ ಆರೋಪಿಗೆ ಬಿಡುಗಡೆಗೆ ಅರ್ಹರಿರುತ್ತಾರೆಂದು ಪರಿಗಣಿಸಿ, ಈ ಕೆಳಕಂಡಂತೆ ಆದೇಶವನ್ನು ಈ ನ್ಯಾಯಾಲಯ ಮಾಡುತ್ತದೆ.

**:ಆದೇಶ:**

ದಂಡ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ 1 ರಿಂದ 4ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆಯ ಕಲಂ 323, 324, 427, 447, 504, 506 ರೆ/ವಿ 34 ರ ಆಪಾದನೆಗಳಿಂದ ದೋಷ ಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿತರ ವೈಯುಕ್ತಿಕ ಬಂಧ ಪತ್ರ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆ ಪತ್ರಗಳನ್ನು

ರದ್ದು ಪಡಿಸಲಾಗಿದೆ.

ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437-A ರ ಅನುಸಾರ ₹50,000/- ಮೊತ್ತದ ವೈಯಕ್ತಿಕ ಬಂಧ ಪತ್ರ ಮತ್ತು ಸಮಾನ ಮೊತ್ತಕ್ಕೆ ಒಬ್ಬ ಜಾಮೀನುದಾರರೊಂದಿಗೆ ಜಾಮೀನುದಾರ ಬಂಧ ಪತ್ರ ಕೊಡತಕ್ಕದ್ದು. ಸದರಿ ಬಂಧ ಪತ್ರಗಳು ಇವತ್ತಿನಿಂದ 6 ತಿಂಗಳ ಅವಧಿಯವರೆಗೆ ಮಾನ್ಯವಾಗಿರುತ್ತವೆ.

ಅಪೀಲು ಅವಧಿ ಮುಗಿದ ನಂತರ ಪಿಎಫ್ ನಂ.176/2020 ದಿನಾಂಕ.17.12.2020 ರಡಿಯಲ್ಲಿ ಕ್ರಮ ಸಂಖ್ಯೆ ಸಂಖ್ಯೆ-1 ಮತ್ತು 2 ರಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುವ 2 ½ ಇಂಚಿನ ಪ್ಲಾಸ್ಟಿಕ್ ಗೇಟ್ ವಾಲ್ ಮತ್ತು ಹಿಡಿ ಗಾತ್ರದ ಸುಮಾರು 2 ¾ ಅಡಿ ಉದ್ದದ ಎರಡು ಬಿದಿರಿನ ಎರಡು ದೊಣ್ಣೆಗಳು ಇವು ಬೆಲೆ ಬಾಳದ ವಸ್ತುಗಳಾಗದಿದ್ದರಿಂದ, ಇವನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಿದೆ.

*(ಶೀಘ್ರಲಿಪಿಗಾರರು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ **02 ನೇ ಏಪ್ರಿಲ್ 2026** ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ.**

**::ಅನುಬಂಧ::**

**1. <u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ</u>**

ಪ್ರಾಸಾ-1 : ಜಯಶ್ರೀ

ಪ್ರಾಸಾ-2 : ಕಿರಣ್

ಪ್ರಾಸಾ-3 : ಬಸವರಾಜು ಕೆ.ವಿ

**2. <u>ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳುಃ</u>**

ನಿಶಾನೆ ಪಿ-1 : ದೂರು

ನಿಶಾನೆ ಪಿ-1(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-2 : ಪಂಚನಾಮೆ

ನಿಶಾನೆ ಪಿ-2(ಎ) : ಪ್ರಾಸಾ-1 ರವರ ಸಹಿ

ನಿಶಾನೆ ಪಿ-3 : ಪ್ರಾಸಾ-2 ರವರ ಹೇಳಿಕೆ

ನಿಶಾನೆ ಪಿ-4 : ಪ್ರಾಸಾ-3 ರವರ ಹೇಳಿಕೆ

**3. ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ**

**ಇಲ್ಲಾ**

**4. ಆರೋಪಿ ಪರ ಹಾಜರು ಪಡಿಸಿದ ದಾಖಲೆಗಳುಃ**

**ಇಲ್ಲಾ**

**5. ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೆಮಾಲುಗಳುಃ**

**ಇಲ್ಲಾ**

**(ರವಿಪ್ರಕಾಶ್ ಟಿ ಆವಿನ್)**
**3 ನೇ ಅಧಿಕ ಸಿವಿಲ್ ಜಡ್ಜ್ ಮತ್ತು**
**ಜೆ.ಎಂ.ಎಫ್.ಸಿ.,ಕನಕಪುರ.**